ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 169-175
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅರಕಲಗೂಡು ತಾಲೂಕಿನ ಗ್ರಾಮದೇವತೆ ಹಬ್ಬಗಳು ಮತ್ತು ಜಾತ್ರೆಗಳು

**ಚಿದಂಬರ ಹೆಚ್.ಪಿ[1] ಮತ್ತು ಡಾ.ಹೆಚ್ ಟಿ. ವೆಂಕಟೇಶಮೂರ್ತಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಮಾರ್ಗದರ್ಶಕರು
ಕನ್ನಡ ವಿಭಾಗ, ಸರ್.ಎಂ.ವಿ ಸ್ನಾತಕೊತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ತೂಬಿನಕೆರೆ, ಮಂಡ್ಯ

**Abstract:**
*ಅರಕಲಗೂಡು ತಾಲೂಕು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದಾಗಿದೆ. ಹಾಸನ ಜಿಲ್ಲೆಯನ್ನು ಪ್ರಧಾನವಾಗಿ ದಕ್ಷಿಣ ಮಲೆನಾಡು, ಅರೆಮಲೆನಾಡು, ಮತ್ತು ಮೈದಾನ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಆಡಳಿತಾತ್ಮಕ ದೃಷ್ಟಿಯಿಂದ ಜಿಲ್ಲೆಯನ್ನು ಎಂಟು ತಾಲೂಕುಗಳಾಗಿ ವಿಂಗಡಿಸಲಾಗಿದೆ. ಅರಕಲಗೂಡು ತಾಲೂಕು 672.98 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಗ್ರಾಮೀಣ ಭಾರತೀಯ ಸಂಸ್ಕೃತಿಯಲ್ಲಿ ಹಬ್ಬ, ಉತ್ಸವ ಮತ್ತು ಜಾತ್ರೆಗಳು ಮಹತ್ವವಾದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳನ್ನು ಹೊಂದಿವೆ. ಸಾಮಾನ್ಯವಾಗಿ ದುಷ್ಟ ಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಹಬ್ಬಗಳು ಆಚರಣೆಯಲ್ಲಿವೆ ಹಾಗೂ ಪ್ರತಿಯೊಂದು ಹಬ್ಬಗಳು ಒಂದಲ್ಲ ಒಂದು ಐತಿಹ್ಯ ಅಥವಾ ಪುರಾಣದ ಹಿನ್ನೆಲೆಯನ್ನು ಹೊಂದಿರುತ್ತವೆ. ಅರಕಲಗೂಡು ತಾಲೂಕಿನಾದ್ಯಂತ ಶಕ್ತಿದೇವತೆ ಮಾರಮ್ಮನ ಗುಡಿಗಳಿವೆ. ಸಾಮಾನ್ಯವಾಗಿ ಈ ಗುಡಿಗಳು ಗ್ರಾಮದ ಹೊರಗೆ ಇರುತ್ತವೆ. ಗ್ರಾಮಕ್ಕೆ ಯಾವುದೇ ಕೆಡುಕುಗಳು, ಸಮಸ್ಯೆಗಳು ಬಾರದಂತೆ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ, ಸಾಂಕ್ರಾಮಿಕ ರೋಗಗಳು ಬಂದರೂ ಅವುಗಳನ್ನು ಬೇಗನೆ ನಿವಾರಣೆ ಮಾಡಿ ಗ್ರಾಮದಲ್ಲಿ ನೆಮ್ಮದಿ ಮತ್ತು ಶಾಂತಿಯು ನೆಲೆಸುವಂತೆ ಮಾಡುತ್ತಾಳೆ ಎಂಬ ನಂಬಿಕೆ ಜನಪದರಲ್ಲಿದೆ.*

**Keywords:** *ಅರಕಲಗೂಡು, ಮಾರಮ್ಮ, ಶಕ್ತಿದೇವತೆ, ಗ್ರಾಮದೇವತೆ, ಹಬ್ಬ ಮತ್ತು ಜಾತ್ರೆಗಳು*

## ಪೀಠಿಕೆ

ಅರಕಲಗೂಡು ತಾಲೂಕು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದಾಗಿದೆ. ಅರಕಲಗೂಡು ತಾಲೂಕು ಭೌಗೋಳಿಕವಾಗಿ ಶ್ರೀಮಂತವಾಗಿದೆ. ಅರಕಲಗೂಡು ಪೂರ್ವಭಾಗದಲ್ಲಿ ಹೊಳೆನರಸೀಪುರ, ಪಶ್ಚಿಮದಲ್ಲಿ ಆಲೂರು ಮತ್ತು ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕು, ದಕ್ಷಿಣದಲ್ಲಿ ಪಿರಿಯಾಪಟ್ಟಣ ತಾಲೂಕು ಉತ್ತರದಲ್ಲಿ ಹಾಸನ ತಾಲೂಕುಗಳನ್ನು ಒಳಗೊಂಡಿದೆ. ಆಡಳಿತದ ಅನುಕೂಲಕ್ಕಾಗಿ ಅರಕಲಗೂಡು ತಾಲೂಕನ್ನು ಐದು ಹೋಬಳಿ ಕೇಂದ್ರವಾಗಿ ಕೊಣನೂರು, ದೊಡ್ಡಮಗ್ಗೆ, ರಾಮನಾಥಪುರ, ಮಲ್ಲಿಪಟ್ಟಣ ಹಾಗೂ ಅರಕೂಲಗೂಡು ಎಂದು ವಿಭಾಗ ಮಾಡಲಾಗಿದೆ.

ಅರಕಲಗೂಡು ತಾಲೂಕಿನ ವಿಸ್ತೀರ್ಣ 672.98 ಚದುರ ಕಿಲೋಮೀಟರ್, ಇಲ್ಲಿ ಅರಕಲಗೂಡು ಕೇಂದ್ರ ಸ್ಥಳವಾಗಿದ್ದು, ಪೂರ್ವಾಭಿಮುಖವಾಗಿ 20

***Please cite this article as:*** ಚಿದಂಬರ ಹೆಚ್.ಪಿ ಮತ್ತು ಹೆಚ್.ಟಿ. ವೆಂಕಟೇಶಮೂರ್ತಿ. (2024). ಅರಕಲಗೂಡು ತಾಲೂಕಿನ ಗ್ರಾಮದೇವತೆ ಹಬ್ಬಗಳು ಮತ್ತು ಜಾತ್ರೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(2), 169–175

ಕಿಲೋ ಮೀಟರ್, ಪಶ್ಚಿಮದಲ್ಲಿ, 20 ಕಿಲೋ ಮೀಟರ್, ಉತ್ತರದಲ್ಲಿ 10 ಕಿಲೋಮೀಟರ್ ಹಾಗೂ ದಕ್ಷಿಣದಲ್ಲಿ 30 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ.

2011ರ ಪ್ರಕಾರ 2,04,585 ಜನಸಂಖ್ಯೆ ಕಂಡು ಬರುತ್ತದೆ. ಇದರಲ್ಲಿ ಪುರುಷರ ಸಂಖ್ಯೆ 1,02,297 ಹಾಗೂ ಮಹಿಳೆಯರ ಸಂಖ್ಯೆ 1,02,288. ರಷ್ಟು ಮಹಿಳೆಯರಿದ್ದಾರೆ. ಇದರಲ್ಲಿ ಶೇ.98.8 ಗ್ರಾಮೀಣ ಪ್ರದೇಶಗಳಲ್ಲಿಯೂ, ಶೇ.8.2 ನಗರ/ಪಟ್ಟಣ ಪ್ರದೇಶಗಳಲ್ಲಿಯೂ ವಾಸ ಮಾಡುತ್ತಿದ್ದಾರೆ. ಲಿಂಗಾನುಪಾತ 1000 ಇದೆ. ತಾಲೂಕಿನ ಸಾಕ್ಷರತ ಪ್ರಮಾಣ 68.8, ಪುರುಷ ಸಾಕ್ಷರತಾ ಪ್ರಮಾಣ 70.4%,, ಮಹಿಳೆಯರ ಸಾಕ್ಷರತಾ ಪ್ರಮಾಣ 54.0% ರಷ್ಟಿದೆ.

**ಭೂಮಿ ಮತ್ತು ಮಣ್ಣು**

ಅರಕಲಗೂಡು ತಾಲೂಕು ಭೌಗೋಳಿಕವಾಗಿ 64,450 ಹೆಕ್ಟೇರ್ ಭೂಮಿಯನ್ನು ಹೊಂದಿದೆ. ತಾಲೂಕಿನಲ್ಲಿ ಕಲ್ಲು ಮಿಶ್ರಿತ ಬಿಳಿಯ ವರ್ಣದ ಮಣ್ಣು, ಕೆಂಪು ಮಣ್ಣು, ಕಪ್ಪು ಮಣ್ಣು, ಮರಳು ಮಿಶ್ರಿತ ಕೆಂಪು ಜೇಡಿ ಮಣ್ಣನ್ನು ಹೊಂದಿದೆ. ಮಲ್ಲಿಪಟ್ಟಣ ಕೊಣನೂರು ಹೋಬಳಿಗಳು ಅರೆಮಲೆನಾಡಿನಂತೆ ಕಾಣಿಸಿಕೊಂಡರೆ, ರಾಮನಾಥಪುರ, ದೊಡ್ಡಮಗ್ಗೆ ಹಾಗೂ ಕಸಬಾ ಹೋಬಳಿಗಳು ಬಯಲುಸೀಮೆ ಪ್ರದೇಶದ ಗುಂಪಿಗೆ ಸೇರುತ್ತವೆ. ಹಾಗಾಗಿ ಅರಕಲಗೂಡು ತಾಲೂಕು ಭೂಮಿ ಕೃಷಿಗೆ ಯೋಗ್ಯವಾಗಿದ್ದು ಮುಂಗಾರು, ಹಿಂಗಾರು, ಕಾರಗಾಲ ಸಂದರ್ಭಗಳಲ್ಲಿ ಮಳೆ ಋತುವಿನ ಆಗಮನಕ್ಕೆ ಅನುಗುಣವಾಗಿ ವ್ಯವಸಾಯವನ್ನು ಮಾಡುತ್ತಾ ಕೃಷಿಯಲ್ಲಿ ತೊಡಗಿಕೊಂಡಿರುತ್ತಾರೆ.

**ಬೆಟ್ಟ-ಗುಡ್ಡಗಳು**

ಈ ತಾಲೂಕಿನ ಪಶ್ಚಿಮದಲ್ಲಿ ಕಾಡುಗಳಿಂದ, ಚಿಕ್ಕಚಿಕ್ಕ ಬೆಟ್ಟಗುಡ್ಡಗಳಿವೆ. ಅಲ್ಲಲ್ಲಿ ವಿಶಾಲವಾದ ಕುರುಚಲು ಹುಲ್ಲು ಮತ್ತು ಮರಗಳುಳ್ಳ ಕಾವಲುಗಳಿವೆ. ಅರಣ್ಯ ಕಡಿಮೆ. ತಾಲೂಕಿನಲ್ಲಿರುವ ವಿವಿಧ ಬೆಟ್ಟಗಳು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ವಲಸೆ ಮೂಲದ ದೇವತೆ ಮತ್ತು ನೆಲಮೂಲ ದೇವತೆಗಳನ್ನು ಹೊಂದಿರುವ ಬೆಟ್ಟಗಳಲ್ಲಿ ದೇವತೆಗಳು ನೆಲೆಸಿದ್ದಾರೆ. ಅವುಗಳೆಂದರೆ ಮಣಜೂರು ರಂಗನಾಥ ಸ್ವಾಮಿ ಬೆಟ್ಟ, ಹರದೂರು ರಂಗನಾಥ ಸ್ವಾಮಿ ಬೆಟ್ಟ, ಕಬ್ಬಳ್ಳಿಗೆರೆ ಬೆಟ್ಟ, ಅಕ್ಕಲವಾಡಿಬೆಟ್ಟ, ಕಣಿವೆ ಬಸಪ್ಪನ ಬೆಟ್ಟಗಳು ಪ್ರೇಕ್ಷಣೀಯ ಸ್ಥಳಗಳಾಗಿದ್ದು ಪ್ರವಾಸಿಗರ ಕಣ್ಮನ ಸೆಳೆಯುವ ತಾಣಗಳಾಗಿವೆ. ಎತ್ತರವಾದ ಬೆಟ್ಟಗಳ ಮೇಲೆ ದೇವಾಲಯಗಳಿದ್ದು ವಿಹಾರಧಾಮಗಳನ್ನು ಹೋಲುತ್ತವೆ. ಈ ಸ್ಥಳಗಳಲ್ಲಿ ಜಾತ್ರೆಗಳು ನಡೆಯುತ್ತವೆ. ಅದರಲ್ಲಿಯೂ ಪ್ರಧಾನವಾಗಿ ಮಣಜೂರು ರಂಗನಾಥಸ್ವಾಮಿ ಬೆಟ್ಟದಲ್ಲಿ ವೈಷ್ಣವ ಸಂಪ್ರದಾಯದ ಜಾತ್ರೆ ನಡೆಯುತ್ತದೆ. ಈ ಜಾತ್ರೆಯನ್ನು ಹದಿನಾರು ಗ್ರಾಮಗಳ ಜನಸಮೂಹ ಸೇರಿ ಒಟ್ಟಿಗೆ ಜಾತ್ರೆಯನ್ನು ನಡೆಸುತ್ತಾರೆ. ಈ ಬೆಟ್ಟದ ಸುತ್ತ ದಟ್ಟವಾದ ಅರಣ್ಯವು ಆವರಿಸಿಕೊಂಡಿದೆ.

**ನೀರಾವರಿ ಸೌಕರ್ಯ**

ಅರಕಲಗೂಡು ತಾಲೂಕು ಕೃಷಿಗೆ ಮಳೆ, ಅಣೆಕಟ್ಟು, ಕಾಲುವೆ, ಕೆರೆಗಳನ್ನು ಅವಲಂಬಿಸಿದೆ. ಕಸಬಾ ಹೋಬಳಿಯ ಅರ್ಧಭಾಗ, ಮಲ್ಲಿಪಟ್ಟಣ ಮತ್ತು ದೊಡ್ಡಮಗ್ಗೆ ಹೋಬಳಿಗಳು ಕೃಷಿಗೆ ಮಳೆಯನ್ನು ಅವಲಂಬಿಸಿದೆ. ಉಳಿದ ಹೋಬಳಿಗಳು ಅಣೆಕಟ್ಟು, ಕಾಲುವೆ ಕೆರೆಗಳನ್ನು ಅವಲಂಬಿಸಿವೆ. ಇದಲ್ಲದೆ ಕೊಳವೆಬಾವಿಗಳ ಮೂಲಕ ಕೃಷಿ ಮಾಡಲಾಗುತ್ತಿದೆ. ಹೇಮಾವತಿ, ಹಾರಂಗಿ ಜಲಾಶಯ ಮತ್ತು ಕಟ್ಟೇಪುರ ಅಣೆಕಟ್ಟುಗಳ ಮೂಲಕ ಕೃಷಿಗೆ ಪ್ರಧಾನವಾಗಿ ನೀರು ಸಿಗುತ್ತಿದೆ.

**ಹೇಮಾವತಿ ಜಲಾಶಯ**

ಈ ಜಲಾಶಯವು ಚಿಕ್ಕಮಗಳೂರಿನ ಮೂಡಿಗೆರೆ ತಾಲೂಕಿನ ಮೇಲ್ ಬಂಗಾಡಿಯ ಜವಳಿ ಬಳಿ ಹುಟ್ಟಿ

ಹರಿಯುತ್ತದೆ. ಈ ನದಿಯು ಕಾವೇರಿ ನದಿಯ ಉಪನದಿಯಾಗಿರುತ್ತದೆ. ಹಾಸನ ತಾಲೂಕು ದಕ್ಷಿಣ ಗಡಿಯಾಗಿ ಹರಿದು ಅರಕಲಗೂಡು ತಾಲೂಕನ್ನು ಬೇರ್ಪಡಿಸಿ ಗೊರೂರು ಬಳಿ ಯಗಚಿ ನದಿಯನ್ನು ಕೂಡಿಕೊಂಡು ಹೊಳೆನರಸೀಪುರ ತಾಲೂಕಿನ ಮುಖಾಂತರ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಹಾಸನ ಜಿಲ್ಲೆಯ ಗಡಿಭಾಗದಲ್ಲಿ ಹರಿದು ಕೊಡಗು ಜಿಲ್ಲೆಯನ್ನು ವಿಂಗಡಿಸುತ್ತದೆ. ಈ ನದಿಗೆ ಗೊರೂರು ಬಳಿ ಬೃಹತ್ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಹೇಮಾವತಿ ಜಲಾಶಯ 1922 ಅಡಿ ಎತ್ತರವಿದ್ದು ಎಡ ಬಲ ಮತ್ತು ಬಲದಂಡೆ ನಾಲೆ ಹೊಂದಿದೆ.

ಹೇಮಾವತಿ ದಂಡೆ ನಾಲೆಯಿಂದ ಈ ತಾಲೂಕಿನ 3,587 ಎಕರೆ ಭೂಮಿಯು ನೀರಾವರಿಯನ್ನು ಹೊಂದಿದೆ. ಈ ತಾಲ್ಲೂಕಿನಾದ್ಯಂತ 28 ಕಿಲೋಮೀಟರ್ ದೂರ ಈ ನದಿ ಹರಿಯುತ್ತದೆ. ವಡ್ಡರಹಳ್ಳಿ, ಮರಡಿ, ಅತ್ನಿ, ಹೆಬ್ಬಾಲೆ, ಗಂಜಲಗೋಡು, ಹರದೂರು ಮುಖಾಂತರ ಹೊಳೆನರಸೀಪುರ ಸೇರುತ್ತದೆ. ಈ ಭಾಗದಲ್ಲಿ ಪ್ರಧಾನವಾಗಿ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಈ ನದಿಯು ಮುಂದೆ ಕೃಷ್ಣರಾಜಸಾಗರದ ನೈಋತ್ಯದಲ್ಲಿ ಕಾವೇರಿಯನ್ನು ಸೇರಿಕೊಳ್ಳುತ್ತದೆ.

**ಹಾರಂಗಿ ಜಲಾಶಯ**

ಈ ಜಲಾಶಯವು ಕಾವೇರಿ ನದಿಯ ಉಪನದಿಯಾಗಿದೆ. ಈ ಜಲಾಶಯಕ್ಕೆ 'ಸುವರ್ಣಾವತಿ' ಎಂಬ ಹೆಸರಿದೆ. ಈ ಜಲಾಶಯವು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಕುಶಾಲನಗರ ಕೂಡಿಗೆ ಬಳಿ ಕಾವೇರಿ ನದಿ ಸೇರುತ್ತದೆ. ಈ ಬಲದಂಡೆ ಕಾಲುವೆಯು 25 ಕಿ.ಮೀ. ದೂರ ಹರಿದು, 7,328 ಎಕರೆ ಭೂಮಿಗೆ ನೀರಾವರಿಯನ್ನು ಒದಗಿಸುತ್ತದೆ. ತಾಲೂಕಿನ ಮಾದಾಪುರ ಗಬ್ಬಳ್ಳಿ, ಮಲ್ಲಿನಾಥಪುರ, ಕಟ್ಟೇಪುರ, ಗಂಗೂರು, ಹೊಸಳ್ಳಿ, ರುದ್ರಪಟ್ಟಣ, ಕಂಠಾಪುರ ಮೂಲಕ ಕೃಷ್ಣರಾಜಸಾಗರವನ್ನು ಪ್ರವೇಶಿಸುತ್ತದೆ. ಈ ಜಲಾಶಯದ ನೀರಾವರಿಯು 'ಖಾರೀಫ್' ಬೆಳೆಗೆ ಮಾತ್ರ ಉಪಯೋಗವಾಗುತ್ತದೆ.

**ಕಟ್ಟೇಪುರ ಜಲಾಶಯ**

ಈ ಜಲಾಶಯವು ಕಾವೇರಿ ನದಿಯ ಉಪನದಿಯಾಗಿದೆ. ಈ ತಾಲೂಕಿನಲ್ಲಿ ಪ್ರಧಾನವಾಗಿ ಕಾವೇರಿ ನದಿಯು ಹರಿಯುತ್ತದೆ. ಈ ಕಾವೇರಿ ನದಿಗೆ ಇದೇ ತಾಲೂಕಿನ ಕಟ್ಟೇಪುರ ಗ್ರಾಮದ ಬಳಿ ಜಲಾಶಯವನ್ನು ನಿರ್ಮಿಸಲಾಗಿದೆ. ಅಂದರೆ 1732ರಲ್ಲಿ ಕೃಷ್ಣರಾಜ ಒಡೆಯರ ಕಾಲದಲ್ಲಿ ವಿಶ್ವೇಶ್ವರಯ್ಯ ಅವರ ತಂತ್ರಗಾರಿಕೆಯಲ್ಲಿ 'ಕಟ್ಟೇಪುರ' ಎಂಬ ಹಳ್ಳಿಯ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿದೆ. ಈ ಅಣೆಕಟ್ಟಿನಿಂದ ಎರಡು ನಾಲೆಗಳು ಹರಿಯುತ್ತವೆ. ಬಲದಂಡೆ ನಾಲೆ ಈ ತಾಲೂಕಿನಲ್ಲಿ ಕಂಠಾಪುರದವರೆಗೂ 25 ಕಿ.ಮೀ. ದೂರ ಹರಿದು ಸರಗೂರು, ಕೊಣನೂರು, ರಾಮನಾಥಪುರ, ಬಸವಾಪಟ್ಟಣ, ಕೇರಳಾಪುರ ಮುಂತಾದ ಗ್ರಾಮಗಳಿಗೆ ನೀರಿನ ಸೌಕರ್ಯ ಒದಗಿಸುತ್ತಿದೆ. ಎಡದಂಡೆ ನಾಲೆ 32 ಕಿ.ಮೀ. ದೂರ ಹರಿದು 5000 ಎಕರೆ ಭೂಮಿಗೆ ನೀರಾವರಿ ಒದಗಿಸಿದೆ.

**ಪ್ರಾಣಿ ಸಂಪತ್ತು**

ಸಸ್ಯ ಸಂಪತ್ತು ಎಲ್ಲಿ ಅಧಿಕವಾಗಿರುತ್ತದೆಯೋ ಅಲ್ಲಿ ಪ್ರಾಣಿ ಸಂಪತ್ತು ಕೂಡ ಹೇರಳವಾಗಿರುತ್ತದೆ. ಸಾಕು ಪ್ರಾಣಿಗಳು ರೈತರ ಜೀವನಾಡಿಯಾಗಿದ್ದು ಅವರ ಆರ್ಥಿಕ ಬೆನ್ನೆಲುಬು ಆಗಿವೆ. ಹಸುಗಳು, ಎಮ್ಮೆಗಳು, ಕುರಿಗಳು, ಮೇಕೆಗಳು, ಆಡುಗಳು ರೈತರ ಆದಾಯ ಮೂಲಗಳಾಗಿವೆ. ತಾಲೂಕಿನಾದ್ಯಂತ 2,980 ಹೆಕ್ಟೇರ್ ಖಾಯಂ ಗೋಮಾಳವನ್ನು ಹೊಂದಿದ್ದು, ಇಲ್ಲಿನ ಪಶು ಸಂಗೋಪನೆ ಮತ್ತು ಹೈನುಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ಈ ಪ್ರಾಣಿಗಳ ಸಂರಕ್ಷಣೆಗಾಗಿ ಎರಡು ಪಶು ವೈದ್ಯಕೀಯ ಆಸ್ಪತ್ರೆಗಳಿದ್ದು, ಹನ್ನೆರಡು ಚಿಕಿತ್ಸಾಲಯಗಳಿವೆ. ಆರು ಪ್ರಾಥಮಿಕ ಪಶು ವೈದ್ಯ ಕೇಂದ್ರಗಳು, ಒಂದು

ಸಂಚಾರಿ ಚಿಕಿತ್ಸಾಲಯ, ಒಂದು ಕೃತಕ ಗರ್ಭಧಾರಣಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ತಾಲೂಕಿನಲ್ಲಿ ಹಾಲಿನ ಸರಬರಾಜು ಅಧಿಕವಾಗಿದ್ದು 63 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, 14,490 ಸದಸ್ಯರನ್ನು ಒಳಗೊಂಡಿದೆ. ಹೈನುಗಾರಿಕೆಯು ಪ್ರಧಾನ ಉದ್ಯೋಗವಾಗಿದೆ.

**ಅರಕಲಗೂಡು ತಾಲೂಕಿನ ಗ್ರಾಮಗಳ ದೇವತೆ, ನಂಬಿಕೆಗಳು ಮತ್ತು ಸಂಪ್ರದಾಯಗಳು**

ಕರ್ನಾಟಕ ರಾಜ್ಯವನ್ನು ಒಳಗೊಂಡಂತೆ ಭಾರತ ದೇಶವು ದೈವದಲ್ಲಿ ಮತ್ತು ದೇವರಲ್ಲಿ ಒಂದು ವಿಶೇಷವಾದ ಶಕ್ತಿಯಿದೆ ಎಂಬ ಭಾವನೆಯೊಂದಿಗೆ ಮಾನವನ ಜನ್ಮಕ್ಕೆ ಮತ್ತು ಆತನ ಸರಿ ತಪ್ಪುಗಳ ನಡವಳಿಕೆ, ಅನಾರೋಗ್ಯಕ್ಕೆ, ಸಾವು ನೋವುಗಳಿಗೆ ಆತನೇ ಕಾರಣ ಎಂಬ ತಿಳುವಳಿಕೆಯು ನಮ್ಮ ಜನಪದರಲ್ಲಿ ಆಳವಾಗಿ ಬೇರೂರಿದೆ. ಜನಪದರ ನಂಬಿಕೆಯಂತೆ ಈ ದೇವರು ಹೇಗೆ ಆಡಿಸುತ್ತಾನೋ ಹಾಗೆ ಮನುಷ್ಯರಾದ ನಾವುಗಳು ಆಡಬೇಕು. ಅಲ್ಲದೆ ಆತನನ್ನು ತೃಪ್ತಿಯಾಗುವಂತೆ, ಒಪ್ಪಿಕೊಂಡ ಹರಕೆಗಳನ್ನು ತಮ್ಮ ಸಮಯದ ನಿಗದಿಯಂತೆ ಪಕ್ಷಿ, ಪ್ರಾಣಿಬಲಿ, ಇತರೆ ಹರಕೆಯ ರೂಪಗಳನ್ನು ಕೊಟ್ಟರೆ ತೃಪ್ತಿಪಟ್ಟುಕೊಂಡ ನಂತರ ದೇವರು ನಮಗೆ ಬೇಕಾದುದನ್ನು ಕೊಟ್ಟು ಮನುಷ್ಯರನ್ನು ಸಂತೃಪ್ತಿ ಪಡಿಸುತ್ತಾನೆ ಎಂಬ ನಂಬಿಕೆಯು ಇಂದಿಗೂ ಜೀವಂತವಾಗಿದೆ. ವೈಯಕ್ತಿಕ ಹಾಗೂ ಗ್ರಾಮದ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ, ಒಳ್ಳೆಯ ಬದುಕನ್ನು ನೀಡಲಿ ಎಂಬ ನಂಬಿಕೆಯಿಂದ ಗ್ರಾಮ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಹಬ್ಬಗಳು, ಉತ್ಸವಗಳು, ಜಾತ್ರೆಗಳು, ಪ್ರತಿವರ್ಷದಂತೆ ಅಥವಾ ಕೆಲವು ಐದು ವರ್ಷಗಳಿಗೊಮ್ಮೆ ಜಾತ್ರೆಗಳು ನಡೆಯುತ್ತವೆ. ಇವೆಲ್ಲವೂಗಳು ಕೂಡ ಗ್ರಾಮೀಣ ಸಮಾಜ ಪ್ರಧಾನ ಲಕ್ಷಣಗಳಾಗಿವೆ. ಇವು ಹಳ್ಳಿಗಳ ಸಂಸ್ಕೃತಿಯ ಉಳಿಯುವಿಕೆಗೂ ಕಾರಣವಾಗಿವೆ.

**ಅರಕಲಗೂಡು ತಾಲೂಕಿನ ಹಬ್ಬ ಮತ್ತು ಜಾತ್ರೆಗಳು**

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ಮಹತ್ತ್ವವಾದವುಗಳಾಗಿವೆ. ಇವುಗಳು ಸಂಸ್ಕೃತಿ ಖನಿಯ ರೂಪಗಳಾಗಿವೆ. ಸಾಮಾನ್ಯವಾಗಿ ದುಷ್ಟ ಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಹಬ್ಬಗಳು ಆಚರಣೆಯಲ್ಲಿವೆ ಹಾಗೂ ಎಲ್ಲ ಹಬ್ಬಗಳಿಗೂ ಒಂದಲ್ಲ ಒಂದು ಐತಿಹ್ಯ ಅಥವಾ ಸಂಪ್ರದಾಯಗಳು ಹಿನ್ನೆಲೆಯಾಗಿರುತ್ತವೆ.

**ಮಾರಿ ಹಬ್ಬ**

ಅರಕಲಗೂಡು ತಾಲೂಕಿನಾದ್ಯಂತ ಮಾರಮ್ಮನ ಗುಡಿಗಳಿದ್ದು ಅವು ಶಕ್ತಿ ದೇವತೆಗಳಾಗಿವೆ. ಸಾಮಾನ್ಯವಾಗಿ ಮಾರಮ್ಮನ ಗುಡಿಗಳು ಗ್ರಾಮದ ಹೊರಗೆ ಇರುತ್ತವೆ. ಮಾರಮ್ಮಳೇ ಆ ಗ್ರಾಮದ ಶಕ್ತಿಯ ಪ್ರತಿನಿಧಿಯಾಗಿದ್ದಾಳೆ. ಗ್ರಾಮಕ್ಕೆ ಯಾವುದೇ ಕೆಡುಕುಗಳು, ಸಮಸ್ಯೆಗಳು ಬಾರದಂತೆ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ, ಸಾಂಕ್ರಾಮಿಕ ರೋಗಗಳು ಬಂದರೂ ಅವುಗಳನ್ನು ಬೇಗ ನಿವಾರಣೆ ಮಾಡಿ ಗ್ರಾಮದಲ್ಲಿ ನೆಮ್ಮದಿ ಮತ್ತು ಶಾಂತಿಯು ನೆಲೆಸುವಂತೆ ಮಾಡುತ್ತಾಳೆ ಎಂಬ ನಂಬಿಕೆ ಜನಪದರಿಗಿದೆ. ಮಾರಿಯನ್ನು ಎಲ್ಲ ರೀತಿಯಲ್ಲಿಯೂ ತೃಪ್ತಿಪಡಿಸಿದರೆ ಗ್ರಾಮವು ಕೂಡ ಕ್ಷೇಮವಾಗಿರುತ್ತದೆ ಎಂಬ ಕಾರಣದಿಂದ ಮಾರಮ್ಮಳಿಗೆ ಕುರಿ, ಕೋಳಿ, ಕೋಣ, ಮೇಕೆಗಳನ್ನು ಬಲಿಕೊಡುವುದು ಸಂಪ್ರದಾಯವಿದೆ. ಅಂತೆಯೇ ಕೆಲವು ಗ್ರಾಮಗಳಲ್ಲಿ ಮಾರಮ್ಮನ ಜಾತ್ರೆಗಳು ನಡೆಯುತ್ತವೆ. ತಾಲೂಕಿನ ಕೇಂದ್ರಭಾಗದ ಕೋಟೆ ಪ್ರದೇಶದಲ್ಲಿ ದೊಡ್ಡಮ್ಮ ಮತ್ತು ಚಿಕ್ಕಮ್ಮ ಎಂಬ ಮಾರಮ್ಮ ದೇವಾಲಯಗಳಿವೆ. ಈ ದೇವರುಗಳು ಅತಿ ಮುಖ್ಯವಾದ ದೇವತೆಗಳಾಗಿದ್ದು ಪ್ರತಿ ಐದು ವರ್ಷಗಳಿಗೊಮ್ಮೆ ಹದಿನೆಂಟು ಗ್ರಾಮದ ಜನರು ಒಟ್ಟಿಗೆ ಸೇರಿ ಆಚರಿಸುತ್ತಾರೆ.

**ಬಂಡಿ ಹಬ್ಬಗಳು**

ಗ್ರಾಮಕ್ಕೆ ಯಾವುದೇ ಬರಗಾಲ ಮತ್ತು ಅನಿಷ್ಟ ತಟ್ಟಬಾರದೆಂಬ ಕಾರಣಕ್ಕಾಗಿ ಆಯಾ ಗ್ರಾಮದ ಗ್ರಾಮ ದೇವತೆಯನ್ನು ಆರಾಧನೆ ಮಾಡುವುದರ

ಮೂಲಕ ಬಂಡಿ ಹಬ್ಬವನ್ನು ಆಚರಣೆ ಮಾಡುತ್ತಾರೆ. ಈ ಬಂಡಿ ಹಬ್ಬಗಳು ಇಂತಹದೇ ದಿವಸಗಳು ನಡೆಯಬೇಕು ಎಂಬ ಯಾವುದೇ ತೀರ್ಮಾನವಿರುವುದಿಲ್ಲ. ಗ್ರಾಮಸ್ಥರು ಸಭೆ ಸೇರಿ ಯಾವಾಗ ಮಾಡಬೇಕೆಂದು ತೀರ್ಮಾನ ಕೈಗೊಳ್ಳುವರೋ ಅಂದು ಬಂಡಿ ಹಬ್ಬಗಳು ಜರಗುತ್ತವೆ. ಆಯಾ ಗ್ರಾಮದವರು ತಮಗೆ ಅನುಕೂಲ ದಿವಸಗಳಲ್ಲಿ ಗೊತ್ತುಪಡಿಸಿಕೊಂಡು ಎತ್ತಿನಬಂಡಿಗೆ ಬಾಳೆಯ ಕಂಬಗಳನ್ನು ಬಿಗಿದು ಗ್ರಾಮದೇವತೆಯ ಬಳಿಗೆ ಎಳೆದುಕೊಂಡು ಹೋಗುತ್ತಾರೆ. ಬಂಡಿ ಎಳೆಯುವ ಮೊದಲು ಪ್ರಾಣಿ ಬಲಿ ನೀಡಲಾಗುತ್ತದೆ. ಅನಂತರ ದಾರಿಯುದ್ದಕ್ಕೂ ಮರಿಗಳನ್ನು ಕಡಿದು ದೇವತೆಯ ಬಳಿ ಒಯ್ದು, ಕೆಂಡಕೊಂಡ ಹಾಕಿ ಸುತ್ತಗಾಡಿಗಳನ್ನು ಸುತ್ತಿಸಿ ಹರಕೆ ಮಾಡಿಕೊಂಡವರು ಪ್ರದಕ್ಷಿಣೆ ಮಾಡುತ್ತಾರೆ. ಮನೆಯಲ್ಲಿ ಮಾಡಿದ ಎಡೆಯನ್ನು ತೆಗೆದುಕೊಂಡು ಹೋಗಿ ನೈವೇದ್ಯಾರ್ಪಣೆ ಮಾಡಿ ಸಹಭೋಜನ ಮಾಡಲಾಗುತ್ತದೆ. ಕೃಷಿ ಪ್ರಗತಿಯ ದ್ಯೋತಕವಾಗಿ ಈ ಬಗೆಯ ಹಬ್ಬಗಳನ್ನು ಆಚರಿಸಲಾಗುತ್ತದೆ.

**ಉರಿಬತ್ತಿ ಸೇವೆ**

ಅರಕಲಗೂಡು ತಾಲೂಕಿನ ಗ್ರಾಮ ದೇವತೆಗಳ ಧಾರ್ಮಿಕ ಆಚರಣೆಗಳಲ್ಲಿ 'ಉರಿಬತ್ತಿ ಸೇವೆಯು' ಒಂದು. ಈ ಸೇವೆಯು ತಾಲೂಕಿನ ಎಲ್ಲ ಗ್ರಾಮಗಳ ದೇವರ ಉತ್ಸವಗಳಲ್ಲಿ ಆಚರಿಸಲಾಗುತ್ತದೆ. ಮಲ್ಲಿಪಟ್ಟಣ ಹೋಬಳಿ ಮಣಜೂರು ರಂಗನಾಥ ಸ್ವಾಮಿ ದೇವರ ರಥೋತ್ಸವದ ಹಿಂದಿನ ದಿನ ಉರಿಬತ್ತಿ ಸೇವೆ ನಡೆಯುತ್ತದೆ. ಇದು ಭಕ್ತಾದಿಗಳಲ್ಲಿ ಭಯ, ನಿಷ್ಠೆ ಹಾಗೂ ದೇವರ ಬಗ್ಗೆ ನಿಷ್ಠೆ ಹೊಂದಲು ಕಾರಣವಾಗುವುದು ಅಲ್ಲದೆ ಭಕ್ತಾದಿಗಳಿಗೆ ಮನರಂಜನೆ ನೀಡುತ್ತದೆ.

**ಸಿಡಿ ಜಾತ್ರೆಗಳು**

ಸಿಡಿ ಜಾತ್ರೆ ಮತ್ತು ಹಬ್ಬಗಳು ಪ್ರಮುಖವಾಗಿವೆ. ಸಿಡಿ ಜಾತ್ರೆಯು ತಾಲೂಕಿನ ಮರೂರು, ಹಾನಗಲ್ಲು, ಯಗಚಿ, ಹಂದ್ರಂಗಿ, ಬೈಚನಹಳ್ಳಿ ಗ್ರಾಮಗಳಲ್ಲಿ ನಡೆಯುತ್ತದೆ. ಸಿಡಿ ಆಚರಣೆಗೆ ಒಳಗಾಗುವ ವ್ಯಕ್ತಿಯು ನಿಷ್ಠೆಯಿಂದ ಇರಬೇಕು ಮತ್ತು ಸಂಸಾರದಿಂದ ದೂರ ಉಳಿದಿರಬೇಕು ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ವ್ಯಕ್ತಿಯೊಬ್ಬನು ಕಬ್ಬಿಣದ ಸಲಾಖೆಯ ಕೊಂಡಿಯನ್ನು ಸಿಕ್ಕಿಸಿ ಎತ್ತರವಾದ ರಥದ ಮೇಲೆ ನೇತು ಬಿಡುವುದು ಮತ್ತು ಶರೀರದ ಭಾಗಗಳಿಗೆ ಕಬ್ಬಿಣದ ಚೂಪಾದ ಸಲಾಕೆಗಳಿಂದ ಚುಚ್ಚಿಕೊಳ್ಳುವುದು ಹಬ್ಬದ ವಿಶೇಷವಾಗಿರುತ್ತದೆ.

**ಬಿಂದಿಗೆ ಜಾತ್ರೆ ಮತ್ತು ಉತ್ಸವ**

ಬಿಂದಿಗೆ ಉತ್ಸವವು ತಾಲೂಕಿನ ಹೆಬ್ಬಾಲೆಯ ಉಪ್ಪರಿಗೆ ಬಸವೇಶ್ವರ ಜಾತ್ರೆ, ಯಗಚಿಯ ಮಲ್ಲೇಶ್ವರ ಜಾತ್ರೆ, ದೇವರಹಳ್ಳಿಯ ವೀರಭದ್ರೇಶ್ವರ ಜಾತ್ರೆ, ಬಸವಾಪಟ್ಟಣದ ಜಾತ್ರೆಗಳಲ್ಲಿ ಕಂಡುಬರುತ್ತದೆ. "ನಿರ್ದಿಷ್ಟ ವ್ಯಕ್ತಿಯ ತಲೆಯನ್ನು ಬೋಳಿಸಿ ನೆತ್ತಿಯ ಮೇಲೆ ಗಂಧ ಹಾಕುತ್ತಾರೆ. ಅದು ಒಣಗಿದ ನಂತರ ಸುಮಾರು 6 ಕೆ.ಜಿ ತೂಕದ ಹರಿವಾಣವಿಟ್ಟು, ಮಧ್ಯ ಭಾಗದಲ್ಲಿ ನೀರು ತುಂಬಿದ ಬಿಂದಿಗೆ ಇಡಲಾಗುತ್ತದೆ. ಮೆರವಣಿಗೆ ಪ್ರಾರಂಭವಾದಾಗ ಕರಡಿ ಮೇಳ ತಾಳಕ್ಕನುಗುಣವಾಗಿ ಕುಣಿಯುತ್ತಾ, ದೀರ್ಘದಂಡ ನಮಸ್ಕಾರ ಮಾಡುತ್ತಾ ಜನರನ್ನು ವಿಸ್ಮಯಗೊಳಿಸಲಾಗುತ್ತದೆ. ಬಿಂದಿಗೆಯನ್ನು 'ಪಾರ್ವತಿ' ಎಂಬ ನಂಬಿಕೆಯಿಂದ ಜನಪದರು ಭಾವಿಸಿದ್ದಾರೆ.

**ಕೆಂಡ (ಕೊಂಡ) ಹಾಯುವುದು**

ಕೆಂಡ ಹಾಯುವುದು ಎಂದರೆ ಕೆಂಡದ ಮೇಲೆ ನಡಿಗೆ ಎಂದರ್ಥ. ವೈಷ್ಣವ ಸಂಪ್ರದಾಯದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಉತ್ಸವಮೂರ್ತಿಯನ್ನು ರಥದ ಮೇಲೆ ಕುಳ್ಳಿರಿಸಿ ಅಡ್ಡಪಲ್ಲಕ್ಕಿಯನ್ನು ನಾಲ್ಕು ಜನರು ಹೆಗಲ ಮೇಲೆ ಹೊತ್ತುಕೊಂಡು ಕೆಂಪಾದ ಕೆಂಡದ ಮೇಲೆ ನಡೆದುಕೊಂಡು ಹೋಗುತ್ತಾರೆ. ನಡೆದುಕೊಂಡು

ಹೋದರೂ ಕಾಲುಗಳು ಸುಡುವುದಿಲ್ಲ, ಗಾಯವಾಗುವುದಿಲ್ಲ. ಹಾಗಾಗಿ ಇದು ದೇವರ ಸತ್ಯ ಎಂದು ನಂಬಲಾಗಿದೆ. ಸಾಮಾನ್ಯ ಜನರು ಕೆಂಡದ ಮೇಲೆ ನಡೆದಾಗ ಕಷ್ಟ ಕಾರ್ಪಣ್ಯಗಳು ದೂರವಾಗುತ್ತವೆ ಎಂಬ ನಂಬಿಕೆಗಳಿವೆ.

**ಓಕುಳಿ ಆಚರಣೆ**

ಗ್ರಾಮದಲ್ಲಿ ಸುಗ್ಗಿಯ ಸಂಭ್ರಮದ ಪ್ರತೀಕವಾಗಿ ಓಕುಳಿ ಆಚರಣೆ ಮಾಡಲಾಗುತ್ತದೆ. ಓಕುಳಿಯಲ್ಲಿ ಒಂದು ಕೊಡ ಅಥವಾ ನೀರಿನ ಹಂಡೆಗೆ ಪೂಜೆ ಮಾಡಿ ಆ ನೀರಿಗೆ ಅರಿಶಿಣ, ಕುಂಕುಮವನ್ನು ಹಾಕಿ ಮಿಶ್ರಣ ಮಾಡಿ ಪರಸ್ಪರ ಎರಚಾಡಿಕೊಳ್ಳುವುದು ಈ ಹಬ್ಬದ ವಿಶೇಷ. ಮನರಂಜನೆಯೇ ಈ ಹಬ್ಬದ ಪ್ರಮುಖ ಉದ್ದೇಶವಾಗಿರುತ್ತದೆ. ತಾಲೂಕಿನ ಬೆಳವಾಡಿ ಗ್ರಾಮದಲ್ಲಿ ಓಕುಳಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

**ಅರಕಲಗೂಡು ಜಾತ್ರೆಗಳು**

ಜಾತ್ರೆಗಳು ಸಂಸ್ಕೃತಿಯ ಅನಾವರಣದ ಬಿಂಬಗಳು, ಅವುಗಳು ಪರಂಪರಾಗತವಾಗಿ ನಡೆದುಕೊಂಡು ಬಂದಂತಹವುಗಳಾಗಿವೆ. ವರ್ಷಕ್ಕೆ ಒಂದು ಬಾರಿ ಗ್ರಾಮ ದೇವತೆ ಹಬ್ಬಗಳನ್ನು ಆಚರಿಸುತ್ತಾರೆ. ಪ್ರಾಣಿಬಲಿ, ಕೊಂಡ ಹಾಯುವುದು, ಮೆರವಣಿಗೆ ಜಾತ್ರೆಯ ಸಂಪ್ರದಾಯಗಳಾಗಿವೆ. ತಾಲೂಕಿನಲ್ಲಿ ನಡೆಯುವ ಜಾತ್ರೆಗಳನ್ನು ಶೈವ ಸಂಪ್ರದಾಯದ ಜಾತ್ರೆಗಳು, ವೈಷ್ಣವ ಸಂಪ್ರದಾಯದ ಜಾತ್ರೆಗಳು, ಜನಪದ ಸಂಪ್ರದಾಯದ ಜಾತ್ರೆಗಳು ಎಂಬುದಾಗಿ ವಿಂಗಡಿಸಿಕೊಳ್ಳಬಹುದಾಗಿದೆ. ಹೆಬ್ಬಾಲೆ, ಅರಕಲಗೂಡು, ಮಲ್ಲಿಪಟ್ಟಣ, ಕೊಣನೂರು, ಹುಲಿಕಲ್ಲು, ಹರದೂರು, ರಾಮನಾಥಪುರ, ಹಂದ್ರಂಗಿ, ಅರೆಮಾದನಹಳ್ಳಿ, ಕಣಿವೆ ಬಸಪ್ಪ, ಕೇರಳಾಪುರ ಗ್ರಾಮದಲ್ಲಿ ನಡೆಯುತ್ತವೆ.

**ವೈಷ್ಣವ ಸಂಪ್ರದಾಯದಂತೆ ನಡೆಯುವ ಜಾತ್ರೆಗಳು**

ಮಣಜೂರಿನ ರಂಗನಾಥಸ್ವಾಮಿ ಜಾತ್ರೆ, ಹರದೂರು ರಂಗನಾಥ, ಕೊಣನೂರಿನ ಕೊಳಲು ಗೋಪಾಲಸ್ವಾಮಿ, ದೊಡ್ಡಮಗ್ಗೆಯ ವೆಂಕಟರಮಣ ಸ್ವಾಮಿ, ಹುಲಿಕಲ್ಲಿನ ವೆಂಕಟರಮಣ ಸ್ವಾಮಿ ಜಾತ್ರೆಗಳು ಈ ಸಂಪ್ರದಾಯಕ್ಕೆ ಸೇರಿದ ಜಾತ್ರೆಗಳಾಗಿದ್ದು ಈ ದೇವತೆಗಳನ್ನು ಶಿಷ್ಟ ದೇವತೆಗಳೆಂದು ಕರೆಯುತ್ತಾರೆ.

**ಹುಲಿಕಲ್ಲು ವೆಂಕಟರಮಣಸ್ವಾಮಿ ಜಾತ್ರೆ ಮತ್ತು ಉತ್ಸವ**

ಅರಕಲಗೂಡು ತಾಲೂಕಿನಲ್ಲಿ ಈ ಜಾತ್ರೆ ಒಂಬತ್ತು ದಿನಗಳ ಕಾಲ ನಡೆಯುತ್ತದೆ. ಈ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿದ ದೇವಾಲಯ ಎಂಬ ಮಾತಿಗೆ ಸಾಕ್ಷ್ಯಧಾರಗಳಿವೆ. ಅದನ್ನು ಕೆಳಕಂಡಂತೆ ಕಾಣಬಹುದಾಗಿದೆ. ಈ ದೇವಾಲಯ ಮತ್ತು ಜಾತ್ರೆಗಳು ವೈಷ್ಣವ ಧರ್ಮಕ್ಕೆ ಸೇರಿರುವುದರಿಂದ ಈ ವೈಷ್ಣವ ಧರ್ಮದ ಸಂಪ್ರದಾಯದಂತೆ ನಡೆಯುತ್ತವೆ. ಜಾತ್ರೆಯ ಸಂಪ್ರದಾಯ, ವಿಧಿ–ವಿಧಾನಗಳಿಗೆ ಸಂಬಂಧಿಸಿದಂತೆ ಬ್ರಾಹ್ಮಣರೇ ತೀರ್ಮಾನವೇ ಅಂತಿಮವಾಗಿದ್ದು ಅವರ ನಿರ್ದೇಶನ ಮತ್ತು ಮಾರ್ಗದರ್ಶನದಂತೆ ಯುಗಾದಿ ಹಬ್ಬದ ನಂತರ ಪೂರ್ವಾಷಾಢ ನಕ್ಷತ್ರದಲ್ಲಿ ಒಂಬತ್ತು ದಿನ ನಿರಂತರವಾಗಿ ಜಾತ್ರೆ ನಡೆದರೆ 17 ದಿನ ನಿತ್ಯ ನಿರಂತರವಾಗಿ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಎಲ್ಲ ಕೋಮಿನವರೆಗೂ ಕೂಡ ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

**ಮಣಜೂರು ರಂಗನಾಥಸ್ವಾಮಿ ಜಾತ್ರೆ**

ಅರಕಲಗೂಡಿನಿಂದ ಮಣಜೂರು 16 ಕಿ.ಮೀ. ಇದೆ. ಈ ದೇವರಿಗೆ 'ಬೆಂಕಿರಂಗ' ಎಂಬ ಮತ್ತೊಂದು ಹೆಸರಿದೆ. ಈ ದೇವರಿಗೆ ಏಳು ಜನ ಸಹೋದರರು ಅಂದರೆ ಆದಿಬಯಲು ರಂಗ, ಮಾವಿನ ಕೆರೆರಂಗ, ಎಣ್ಣೆ ಹೊಳೆರಂಗ, ಹರದೂರು ರಂಗ, ಕಬ್ಬತ್ತಿರಂಗ, ಗವಿರಂಗ, ಮಣಜೂರು ರಂಗ ಇದ್ದಾರೆ ಎಂಬ ಜನಪದರ ನಂಬಿಕೆಗಳಿವೆ. ಈ ದೇವರು ಪ್ರಧಾನವಾಗಿ ವೈಷ್ಣವ ಸಂಪ್ರದಾಯದ ಜಾತ್ರೆಯಾಗಿದೆ. ಮಣಜೂರು ಬೆಟ್ಟದ ಮೇಲೆ ಈ ದೇವಾಲಯವಿದೆ. ಪ್ರತಿವರ್ಷವೂ ಫೆಬ್ರವರಿ

ತಿಂಗಳಿನಲ್ಲಿ ಜಾತ್ರೆಯು ನಡೆಯುತ್ತದೆ. ಸುಮಾರು ಹದಿನಾರು ಗ್ರಾಮಗಳಲ್ಲಿ ಈ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಕೆಲವು ಸಂಪ್ರದಾಯ ಮತ್ತು ಆಚರಣೆಗಳನ್ನು ಮಾಡುತ್ತಾರೆ.

**ಕಣಿವೆ ಬಸಪ್ಪನ ಜಾತ್ರೆ**

ಈ ಜಾತ್ರೆ ಶೈವ ಸಂಪ್ರದಾಯದಂತೆ ನಡೆಯುತ್ತದೆ. ಈ ಜಾತ್ರೆಯು ಪ್ರತಿವರ್ಷ ನವೆಂಬರ್ ತಿಂಗಳಿನಲ್ಲಿ ಕಾರ್ತಿಕ ಸೋಮವಾರದಂದು ಪ್ರಾರಂಭವಾಗಿ ಕೊನೆಯ ಕಾರ್ತಿಕ ಮಾಸದಲ್ಲಿ ಮುಗಿಯುತ್ತದೆ. ಈ ದೇವರನ್ನು ಕುರಿತು ಅಲ್ಲಿನ ಭಕ್ತಾದಿಗಳು ವಿಶಿಷ್ಟವಾದ ಆಚರಣೆಗಳನ್ನು ಮಾಡುತ್ತಾರೆ. ಪ್ರತಿ ಸೋಮವಾರ ಬಸವನನ್ನು ಪೂಜೆ ಮಾಡುತ್ತಾರೆ. ನೈವೇದ್ಯಕ್ಕೆ ಗಿಣ್ಣು ಮತ್ತು ರೊಟ್ಟಿಯನ್ನು ನೀಡುತ್ತಾರೆ. ದನಕರುಗಳು ಯಾವುದಾದರೂ ಕಾಯಿಲೆಗೆ ತುತ್ತಾದಾಗ ಅವುಗಳಿಂದ ಪಾರಾಗಲು ಕಣಿವೆ ಬಸಪ್ಪನಿಗೆ ಜನರು ಹರಕೆ ಹೊರುತ್ತಾರೆ. ಗುಣಮುಖವಾದ ನಂತರ ಹರಕೆಯನ್ನು ತೀರಿಸುತ್ತಾರೆ. ಇಲ್ಲಿ ವಿಶೇಷವಾಗಿ ದನಗಳ ಜಾತ್ರೆಯು ನಡೆಯುತ್ತದೆ.

**ಮಲ್ಲಿಪಟ್ಟಣದ ಉಳುಮೇಶ್ವರ ಜಾತ್ರೆ**

ಅರಕಲಗೂಡು ತಾಲೂಕು ಕೇಂದ್ರದಿಂದ ಹನ್ನೆರಡು ಕಿಲೋಮೀಟರ್ ದೂರದಲ್ಲಿರುವ ಮಲ್ಲಿಪಟ್ಟಣದಲ್ಲಿ 'ಉಳುಮೇಶ್ವರ' ದೇವಾಲಯವಿದೆ. ಈ ದೇವಾಲಯವು ಕೊಂಗಾಳ್ವ ಮತ್ತು ಚೋಳರ ಕಾಲದಲ್ಲಿ ನಿರ್ಮಿತವಾದ ದೇವಾಲಯ ಎಂಬುದಕ್ಕೆ ಆಧಾರಗಳು ದೊರಕುತ್ತವೆ. ಈ ದೇವಾಲಯವು ಸುಂದರ ಕೆತ್ತನೆಯ ಕಂಬಗಳಿಂದ ಕೂಡಿದೆ. ಹೊಲದಲ್ಲಿ ಉಳುವೆ ಮಾಡುವಾಗ ನೇಗಿಲಿಗೆ ಶಿವಲಿಂಗ ಸಿಕ್ಕಿದ್ದರಿಂದ ಉಳುಮೇಶ್ವರ ಎಂದು ಹೆಸರಾಗಿದೆ. ಚೋಳರ ಕಾಲದಲ್ಲಿ ಗರ್ಭಗುಡಿ ನಿರ್ಮಿತವಾಗಿದೆ. ಗಾಳಿಮಂಟಪ, ಕಲ್ಯಾಣಮಂಟಪ, ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಜಾತ್ರೆಯಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣ ಮುತ್ತೈದೆಯರು ಪ್ರಮುಖ ಪಾತ್ರವಹಿಸುತ್ತಾರೆ. ಈ ಜಾತ್ರೆಯ ಪ್ರಮುಖ ಪಾತ್ರವಹಿಸುತ್ತಾರೆ. ಈ ಜಾತ್ರೆಯ ಪ್ರಮುಖ ಜವಾಬ್ದಾರಿ ಬ್ರಾಹ್ಮಣರದ್ದು ಆಗಿದ್ದು ಸುತ್ತಮುತ್ತಲ ಗ್ರಾಮದವರೆಲ್ಲ ಸೇರಿ ರಥವನ್ನು ಎಳೆಯುತ್ತಾರೆ. ಇದೇ ಸಂದರ್ಭದಲ್ಲಿ ಶಿವ ಮತ್ತು ಪಾರ್ವತಿಯವರ ಕಲ್ಯಾಣ ನಡೆಯುತ್ತದೆ.

**ರಾಮನಾಥಪುರ ಜಾತ್ರೆ**

ಈ ಜಾತ್ರೆಯು ಪುರಾಣ ಪ್ರಸಿದ್ಧ ಮತ್ತು ಐತಿಹಾಸಿಕ ಮಹತ್ವ ಪಡೆದಿದ್ದು, 'ದಕ್ಷಿಣ ಕಾಶಿ' ಎಂದು ಹೆಸರುವಾಸಿಯಾಗಿದೆ. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಈ ಜಾತ್ರೆ ನಡೆಯುತ್ತದೆ. ಮಾರ್ಗಶಿರ ಶುದ್ಧ ಷಷ್ಠಿಯಂದು ರಥೋತ್ಸವ ಜರುಗುತ್ತದೆ. ರಥದ ಮಧ್ಯದಲ್ಲಿ ಸುಬ್ರಹ್ಮಣ್ಯೇಶ್ವರ ಸ್ವಾಮಿ ವಿಗ್ರಹವಿದೆ. ಜನರು ರಥವನ್ನು ಎಳೆಯುತ್ತಾರೆ. ನವದಂಪತಿಗಳು ತಪ್ಪದೇ ಭಾಗವಹಿಸುತ್ತಾರೆ.

ಹೀಗೆ ಅರಕಲಗೂಡು ತಾಲೂಕಿನಲ್ಲಿ ಹಲವಾರು ಹಬ್ಬ ಮತ್ತು ಜಾತ್ರೆಗಳು ಜರಗುತ್ತವೆ. ಇವು ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಹೆಚ್ಚು ಸಹಕಾರಿಯಾಗಿವೆ.

**ಆಕರ ಗ್ರಂಥಗಳು**


- *ಎಪಿಗ್ರಾಫಿಯಾ ಕರ್ನಾಟಿಕ (ಸಂಪುಟ 8).* ಮರೂರು ಶಾಸಗಳು–ಸಂಖ್ಯೆ 26, 27, 28.
- ಗೋಪಾಲರಾವ್ ಹೆಚ್.ಎಸ್. (2020). *ಕರ್ನಾಟಕ ಇತಿಹಾಸದ ಆಕರಗಳು (ಸಂಪುಟ 1).* ದಿವ್ಯ ಪ್ರಕಾಶನ.
- ಜನಪದ ವಿಶ್ವಕೋಶ. ಮೈಸೂರು ವಿಶ್ವವಿದ್ಯಾನಿಲಯ
- ನಿರ್ವಹಣೆಗೌಡ. *ಅರಕಲಗೂಡು ತಾಲ್ಲೂಕು ಸಾಂಸ್ಕೃತಿಕ ಅಧ್ಯಯನ*
- ಶಿವತಾರಕ ಕೆ.ಬಿ. *ಕರ್ನಾಟಕ ಪುರಾತತ್ವ ನೆಲೆಗಳು*